ದಿನಾಂಕಃ 05-12-2022 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲುಃ ಶ್ರೀ ಬಿ.ಎನ್.ಆರ್ ವಾದಿಗಳ ಪರ ವಕೀಲರಿಂದಃ</u> ನಾನು, ಡಿ.ಡಬ್ಲ್ಯೂ-4 ಮತ್ತು ಪ್ರತಿವಾದಿ 21 ರವರ ಮಗ 3 ಜನ ಸೇರಿ ನ್ಯಾಯಾಲಯಕ್ಕೆ ಬರುತ್ತಿದ್ದೇವೆ ಅಂದರೆ ಸರಿ. ನಾನು ನಿಲವಂಜಿ ಗ್ರಾಮದವರು ಎಂದು ತೋರಿಸಲು ದಾಖಲೆ ಹಾಜರು ಪಡಿಸಿಲ್ಲ. ಪ್ರತಿವಾದಿ 21 ರವರು ನನ್ನನ್ನು ಮತ್ತು ಡಿ.ಡಬ್ಲ್ಯೂ-4 ರವರನ್ನು ಸಾಕ್ಷ್ಯ ನುಡಿಯಲು ಕರೆದುಕೊಂಡು ಬಂದಿದ್ದಾರೆ ಅಂದರೆ ಸರಿ. 21 ನೇ ಪ್ರತಿವಾದಿ ನನಗಿಂತ 25 ರಿಂದ 30 ವರ್ಷ ದೊಡ್ಡವರು ಅಂದರೆ ಸರಿ. ನಾನು ಪ್ರತಿವಾದಿ 21 ರವರಿಗಿಂತ ತುಂಬಾ ಚಿಕ್ಕವನಿರುವುದರಿಂದ ಸಿದ್ದಪ್ಪನ ತಂದೆ ಯಾರು ಅನ್ನುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಅಂದರೆ ಸರಿ, ಆದರೆ ಊರಿನಲ್ಲಿ ಹಿರಿಯರು ಮಾತನಾಡುವುದನ್ನು ಕೇಳಿದ್ದೇನೆ. ಚೆನ್ನಬಸಪ್ಪನಿಗೆ ಎಷ್ಟು ಜನ ಸಹೋದರ ಮತು ಸಹೋದರಿಯರು ಇದ್ದಾರೆ ಅನ್ನುವುದು ನನಗೆ ಮಾಹಿತಿ ಇಲ್ಲ, ಅವರನ್ನು ನಾನು ನೋಡಿಲ್ಲ.

2. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಪಾಲು ವಿಭಾಗದ ಬಗ್ಗೆ ದಾಖಲೆಗಳನ್ನು ನೋಡಿಲ್ಲ. ಸದರಿ ವಿಭಾಗ ಸುಮಾರು 30 ವರ್ಷಗಳ ಹಿಂದೆ ನಡೆದಿರುತ್ತದೆ. ನಿಲವಂಜಿ ಮತ್ತು ಪ್ರುತ್ತೆಶ್ವರ ಗ್ರಾಮದ ಜಮೀನುಗಳನ್ನು ವಿಭಾಗ ಮಾಡಿಕೊಂಡಿದ್ದಾರೆ. ಸದರಿ ವಿಭಾಗದಲ್ಲಿ ಯಾವ ಯಾವ ಸರ್ವೆ ನಂಬರಗಳು ಮತ್ತು ಮನೆಗಳು ಯಾರ ಯಾರ ಭಾಗಕ್ಕೆ ಹೋಗಿರುತ್ತವೆ ಎಂದು ಹೇಳಲು ಆಗುವುದಿಲ್ಲ. ಸದರಿ ಪಾಲು ವಿಭಾಗಕ್ಕೆ ಯಾರ ಯಾರು ಹಾಜರಾಗಿದ್ದರು ಎಂದು ಈಗ ಹೇಳಲು ಆಗುವುದಿಲ್ಲ, ಆಗ ನನಗೆ ಸುಮಾರು 13 ವರ್ಷ ಆಗಿತ್ತು. ಮೂಲ ವಾದಿ, ಅವರ ಮಕ್ಕಳು ಮತ್ತು ಪ್ರತಿವಾದಿ 21 ರವರು ಮತ್ತು ಅವರ ಮಕ್ಕಳು ಒಟ್ಟು ಕುಟುಂಬದವರಲ್ಲ ಅಂದರೆ ಸರಿಯಲ್ಲ. ಮೂಲ ವಾದಿ, ಅವರ ಮಕ್ಕಳು ಮತ್ತು ಪ್ರತಿವಾದಿ 21 ರವರು ಮತ್ತು ಅವರ ಮಕ್ಕಳು ಯಾವ ಯಾವ ಮನೆಗಳಲ್ಲಿ

ಡಿಡಬ್ಲ್ಯೂ-3
ಓ ಎಸ್ 42/2014

ವಾಸಿಸುತ್ತಿದ್ದರು ಅನ್ನುವ ಬಗ್ಗೆ ಮನೆ ಸಂಖ್ಯೆ ಹೇಳಲು ಆಗುವುದಿಲ್ಲ. ಮಹೇಶಪ್ಪ ಮತ್ತು ಪ್ರತಿವಾದಿ 21 ಯಾವತ್ತೂ ಒಟ್ಟು ಕುಟುಂಬದಲ್ಲಿ ವಾಸಿಸಿಲ್ಲ ಅಂದರೆ ನನಗೆ ಹೆಚ್ಚಿನ ಮಾಹಿತಿ ಇಲ್ಲ.

3. ನೀಲವಂಜಿ ಮತ್ತು ಪ್ರತ್ಯೆಕ್ಷರ ಗ್ರಾಮದ ಜಮೀನುಗಳು ಮತ್ತು ಮನೆಗಳು ಮೂಲತಃ ಪ್ರತಿವಾದಿ 21 ರವರ ಮಗನ ಅಜ್ಜಿ ಚಂದ್ರಮ್ಮನವರಿಗೆ ಸೇರಿದ್ದವು. ಈ ಬಗ್ಗೆ ದಾಖಲೆ ನೋಡಿರುವುದಿಲ್ಲ. ಚೆನ್ನಬಸಪ್ಪನಿಗೆ ಮಹೇಶಪ್ಪ ಮತ್ತು ಸಿದ್ದಪ್ಪ ಮಕ್ಕಳು ಅನ್ನುವ ಬಗ್ಗೆ ನಾನು ದಾಖಲೆ ನೋಡಿಲ್ಲ ಆದರೆ ಊರಿನಲ್ಲಿ ಹೇಳುತ್ತಿರುವುದನ್ನು ಕೇಳಿಸಿಕೊಂಡಿದ್ದೇನೆ. ಚೆನ್ನಬಸಪ್ಪನ ಮೂಲ ಊರು ಹುಣಸಿಕಟ್ಟೆ . ಈ ಬಗ್ಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಹುಣಸಿಕಟ್ಟೆ ಬಸಪ್ಪ ತಂದೆ ಗುರುಬಸಪ್ಪ ಇವರು ನಮ್ಮ ಊರಿನವರು ಅಂದರೆ ಸರಿ. ನಾನು ಅವರನ್ನು ನೋಡಿದ್ದೇನೆ. ಅವರಿಗೆ ದೇವಕ್ಕ ಅನ್ನುವವರು ಸೊಸೆ ಅಂದರೆ ಸರಿಯಲ್ಲ. ಹುಣಸಿಕಟ್ಟೆ ಬಸಪ್ಪನವರು 10-12 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ಜೋಳದ ಕೂಡ್ಲಿಗಿ ಮತ್ತು ಹುಣಸಿಕಟ್ಟೆ ಮನೆತನಗಳು ಬೇರೆ ಬೇರೆ ಅಂದರೆ ಸರಿ. ಅವರವರ ಮನೆತನದವರು ಅವರವರ ಮನೆಗಳಲ್ಲಿ ವಾಸಿಸುತ್ತಾರೆ ಅಂದರೆ ಸರಿ. ಬಸಪ್ಪ ತನ್ನ ಸೊಸೆ ದೇವಕ್ಕನಿಗೆ ಮರಣ ಶಾಸನ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಪ್ರತಿವಾದಿ 21 ರವರ ಪತ್ನಿಯ ಹೆಸರು ದೇವಕ್ಕ. ಅವರು ಜೀವಂತ ಇದ್ದಾರೆ ಅಂದರೆ ಸರಿ.

4. ಚೆನ್ನಬಸಪ್ಪನ ಮಗ ಮಹೇಶಪ್ಪ, ಅವರ ಮಕ್ಕಳು ಮತ್ತು ಹುಣಸಿಕಟ್ಟೆ ಬಸಪ್ಪ ಮತ್ತು ಅವರ ಮಕ್ಕಳು ಅವರವರ ಮನೆಗಳಲ್ಲಿ ವಾಸಿಸುತ್ತಿದ್ದಾರೆ ಅಂದರೆ ಸರಿ. ನಾನು ಸಿದ್ದಪ್ಪ ಮತ್ತು ಅಶೋಕ ಅವರ ಹೇಳಿಕೆಯಂತೆ ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ, ನನಗೆ ಗೊತ್ತಿರುವುದನ್ನು ಹೇಳುತ್ತಿದ್ದೇನೆ . ಗಂಗಮ್ಮ ಇವರು ಸಿದ್ದಪ್ಪನ ಸಹೋದರಿ, ಅವರನ್ನು ಹುಣಸಿಕಟ್ಟೆ ಗ್ರಾಮಕ್ಕೆ ನೀಡಿ ಮದುವೆ ಮಾಡಲಾಗಿದೆ. ಚೆನ್ನಬಸಪ್ಪ ಮತ್ತು ಅವರ ವಂಶ ಹಾಗೂ ಹುಣಸಿಕಟ್ಟೆ ಬಸಪ್ಪ ಹಾಗೂ ಅವರ ವಂಶದ ಮೂಲದ

ಬಗ್ಗೆ ಮಾಹಿತಿ ಇಲ್ಲ, ಆದರೆ ಅವರು ಅಣ್ಣತಮ್ಮಂದಿರು ಎಂದು ಹಿರಿಯರು ಹೇಳುತ್ತಿದ್ದರು. ಊರಿನ ಯಜಮಾನರು ಮಾತನಾಡುತ್ತಿರುವುದರ ಆಧಾರದ ಮೇಲೆ ನಾನು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿ .

ಮರು ವಿಚಾರಣೆಃ ಇಲ್ಲ
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ,**

**ಪಿ.ಸಿ.ಜೆ. ಮತ್ತು ಜೆಎಂಎಫ್‌ಸಿ.,**
**ಕೂಡ್ಲಿಗಿ.**